**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 07–02–2019**

# ಪತ್ರಿಕಾ ಆಮಂತ್ರಣ

**1.** ಕೃಷಿ ವೆಚ್ಚ ಹಾಗೂ ಬೆಲೆಗಳ ಆಯೋಗ ವತಿಯಿಂದ ದಕ್ಷಿಣ ರಾಜ್ಯಗಳ 2019–20ನೇ ಸಾಲಿನ ಮುಂಗಾರು ಬೆಳೆಗಳ ಬೆಲೆ ನೀತಿ ಕುರಿತ ಒಂದು ದಿನದ ಸಭೆ

ಉದ್ಘಾಟನೆ:

ಎನ್.ಎಚ್. ಶಿವಶಂಕರ್ ರೆಡ್ಡಿ
ಕೃಷಿ ಸಚಿವರು.

ವಿಜಯ್ ಪಾಲ್ ಶರ್ಮ
ಅಧ್ಯಕ್ಷರು ದೆಹಲಿಯ ಕೃಷಿ ವೆಚ್ಚ ಹಾಗೂ ಬೆಲೆಗಳ ಆಯೋಗ (CACP)
ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ,
ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ,
ಮಹೇಶ್ವರ್ ರಾವ್,
. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ
ದಿನಾಂಕ: 08–02–2018 ಶುಕ್ರವಾರ, ಸಮಯ : ಬೆಳಿಗ್ಗೆ 9–30 ಗಂಟೆಗೆ
ಸ್ಥಳ: ಸಮೃದ್ಧಿ ಸಭಾಂಗಣ, ಕೃಷಿ ಇಲಾಖೆ. ಬೆಂಗಳೂರು.

**2. ಕನ್ನಡ ಪುಸ್ತಕ ರಿಯಾಯಿತಿ ಮಾರಾಟ ಮೇಳ – 2019**

**ಉದ್ಘಾಟನೆ:**

**ನಾಡೋಜ ಡಾ ಚಂದ್ರಶೇಖರ ಕಂಬಾರ,**
**ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು**

**<u>ಮುಖ್ಯ ಅತಿಥಿ:</u>**

ಶ್ರೀಮತಿ ಕೆ.ಎಂ. ಜಾನಕಿ,
ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**<u>ಅಧ್ಯಕ್ಷತೆ:</u>**

ಡಾ ವಸುಂಧರಾ ಭೂಪತಿ,
ಅಧ್ಯಕ್ಷರು,
ಕನ್ನಡ ಪುಸ್ತಕ ಪ್ರಾಧಿಕಾರ.

ದಿನಾಂಕ: 08–02–2019, ಶುಕ್ರವಾರ, ಸಮಯ : ಬೆಳಿಗ್ಗೆ 11–00 ಗಂಟೆಗೆ

ಸ್ಥಳ: ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಬೆಂಗಳೂರು.

**<u>3.</u>** ಭ್ರಷ್ಟಾಚಾರ ನಿಗ್ರಹ ದಳದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಠಾಣೆ ವತಿಯಿಂದ ಪೊಲೀಸ್ ಉಪಾಧೀಕ್ಷಕರ ನೇತೃತ್ವದಲ್ಲಿ ಸಾರ್ವಜನಿಕ ಸಭೆ:

ದಿನಾಂಕ: 08–02–2019, ಶುಕ್ರವಾರ, ಸಮಯ : ಅಪರಾಹ್ನ 12–00 ಗಂಟೆಗೆ

ಸ್ಥಳ: ಸರ್ಜಾಪುರ ಗ್ರಾಮ ಪಂಚಾಯಿತಿ ಕಾರ್ಯಾಲಯ, ಆನೇಕಲ್ ತಾಲ್ಲೂಕು

**<u>4.</u>** <u>ಪತ್ರಿಕಾಗೋಷ್ಠಿ:</u>

ಯುನಾನಿ ದಿನಾಚರಣೆ – 2019” – ಅಂಗವಾಗಿ ಫೆಬ್ರವರಿ 10 ಹಾಗೂ 11 ರಂದು ಯುನಾನಿ ಉತ್ಸವ ಕುರಿತ ಪತ್ರಿಕಾಗೋಷ್ಠಿ.
ಶಿವಾನಂದ ಪಾಟೀಲ್,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ದಿನಾಂಕ: 08–02–2019, ಶುಕ್ರವಾರ, ಸಮಯ : ಮಧ್ಯಾಹ್ನ 2–00 ಗಂಟೆಗೆ

ಸ್ಥಳ: ಬೆಂಗಳೂರು ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಂಗಳೂರು.

ಪತ್ರಿಕಾ ಪ್ರಕಟಣೆ

# ಕನ್ನಡ ಪುಸ್ತಕ ರಿಯಾಯಿತಿ ಮಾರಾಟ ಮೇಳ – 2019

ಬೆಂಗಳೂರು, ಫೆಬ್ರವರಿ 6, 2019 (ಕರ್ನಾಟಕ ವಾರ್ತೆ)

ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಫೆಬ್ರವರಿ 8 ರಿಂದ 12 ರವರೆಗೆ ನಗರದ ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ.ರಸ್ತೆ, ಬೆಂಗಳೂರು ಇಲ್ಲಿ "ಕನ್ನಡ ಪುಸ್ತಕ ರಿಯಾಯಿತಿ ಮಾರಾಟ ಮೇಳ–2019" ಅನ್ನು ಹಮ್ಮಿಕೊಳ್ಳಲಾಗಿದೆ.

ಫೆಬ್ರವರಿ 8 ರಂದು ಬೆಳಿಗ್ಗೆ 11–00 ಗಂಟೆಗೆ ಈ ಮೇಳವನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ನಾಡೋಜ ಡಾ. ಚಂದ್ರಶೇಖರ ಕಂಬಾರ ಅವರು ಉದ್ಘಾಟಿಸಲಿದ್ದಾರೆ. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀಮತಿ ಕೆ.ಎಂ. ಜಾನಕಿ ಅವರು ಪಾಲ್ಗೊಳ್ಳಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ ವಸುಂಧರಾ ಭೂಪತಿ ಅವರು ವಹಿಸಲಿದ್ದಾರೆ.

ಐದು ದಿನಗಳ ಕಾಲ ನಡೆಯುವ ಈ ಮೇಳ ಬೆಳಿಗ್ಗೆ 10–00 ರಿಂದ ರಾತ್ರಿ 8–30 ಗಂಟೆಯವರೆಗೆ ನಡೆಯಲಿದೆ.

ಪ್ರತಿದಿನ ಸಂಜೆ 5–00 ರಿಂದ 6–00 ಗಂಟೆಗೆ ನಡೆಯುವ ಸಾಹಿತಿಗಳೊಂದಿಗೆ ಸೆಲ್ಫಿ ಮತ್ತು ಪುಸ್ತಕಕ್ಕೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಕ್ಷೇತ್ರದ ಗಣ್ಯ ವ್ಯಕ್ತಿಗಳು ಭಾಗವಹಿಸಲಿದ್ದಾರೆ. ಫೆಬ್ರವರಿ 8 ಪ್ರೊ. ಚಿದಾನಂದಮೂತಿ, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಡಾ. ಸಿದ್ಧಲಿಂಗಯ್ಯ, ಫೆಬ್ರವರಿ 9 ರಂದು ಡಾ. ಕೆ.ಎಸ್. ನಿಸಾರ್ ಅಹಮದ್, ಪ್ರೊ. ಚಂದ್ರಶೇಖರ ಪಾಟೀಲ ಹಾಗೂ ಮುಖ್ಯಮಂತ್ರಿ ಚಂದ್ರು, ಫೆಬ್ರವರಿ 10 ರಂದು ಡಾ. ಹಂಪ ನಾಗರಾಜ್ಯ, ಡಾ. ಕಮಲಾಹಂಪನಾ, ಟಿ.ಎಸ್. ನಾಗಾಭರಣ ಹಾಗೂ ಜೋಗಿ ಹಾಗೂ ಫೆಬ್ರವರಿ 11 ರಂದು ಡಾ. ಎಚ್.ಎಸ್. ವೆಂಕಟೇಶಮೂತಿ, ಪ್ರೊ ಎಸ್.ಜಿ. ಸಿದ್ಧರಾಮಯ್ಯ, ಡಾ.

ದೊಡ್ಡರಂಗೇಗೌಡ ಹಾಗೂ ಬಿ.ಆರ್. ಲಕ್ಷ್ಮಣರಾವ್ ಅವರು  ಸಾಹಿತಿಗಳೊಂದಿಗೆ ಸೆಲ್ಫಿ ಮತ್ತು ಪುಸ್ತಕಕ್ಕೆ ಸಹ ಹಾಕುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಅಲ್ಲದೆ ಪ್ರತಿದಿನ ಸಂಜೆ 6 ಗಂಟೆಗೆ ಪುಸ್ತಕ ಮಾರಾಟ ಮಳಿಗೆ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಫೆಬ್ರವರಿ 8 ರಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರು ಇವರ ವತಿಯಿಂದ ಶ್ರೀಮತಿ ಪದ್ಮಜ ಜಯರಾಮ್ ಮತ್ತು ತಂಡದವರಿಂದ ನೃತ್ಯ ಕಾರ್ಯಕ್ರಮ.

ಫೆಬ್ರವರಿ 9 ರಂದು ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರ ವತಿಯಿಂದ ರಂಗಪಯಣ ತಂಡದವರಿಂದ ರಂಗಗೀತೆ ಗಾಯನ.

ಫೆಬ್ರವರಿ 10 ರಂದು ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು ಇವರ ವತಿಯಿಂದ ಗಾನ ಸೌರಭ ಯಕ್ಷಗಾನ ಶಾಲೆ ಇವರಿಂದ ಪ್ರಸಂಗ: " ಸುಧನ್ವ ಕಾಳಗ" ಯಕ್ಷಗಾನವನ್ನು ಹಮ್ಮಿಕೊಳ್ಳಲಾಗಿದೆ.

ಫೆಬ್ರವರಿ 11 ರಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ.

ಫೆಬ್ರವರಿ 12 ರಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು ಇವರ ವತಿಯಿಂದ ಶ್ರೀ ಸಂತವಾಣಿ ಪಿ. ಸುಧಾಕರ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

## ಫೆಬ್ರವರಿ 8 ರಂದು ದಕ್ಷಿಣ ರಾಜ್ಯಗಳ ಬೆಳೆಗಳ ಬೆಲೆ ನೀತಿ ಸಭೆ

ಬೆಂಗಳೂರು, ಫೆಬ್ರವರಿ 6, 2019 (ಕರ್ನಾಟಕ ವಾರ್ತೆ)

ಕೇಂದ್ರ ಸರ್ಕಾರದ ಕೃಷಿ ವೆಚ್ಚ ಹಾಗೂ ಬೆಲೆಗಳ ಆಯೋಗದ ವತಿಯಿಂದ ಫೆಬ್ರವರಿ 8 ರಂದು ಕೃಷಿ ಇಲಾಖೆಯ ಸಮೃದ್ಧಿ ಸಭಾಂಗಣದಲ್ಲಿ ದಕ್ಷಿಣ ರಾಜ್ಯಗಳ 2019–20 ರ ಮುಂಗಾರು ಬೆಳೆಗಳ ನೀಡಿ ಕುರಿತು ಒಂದು ದಿನದ ಸಭೆಯನ್ನು ಏರ್ಪಡಿಸಲಾಗಿರುತ್ತದೆ.

ಈ ಸಭೆಯ ಉದ್ಘಾಟನಾ ಕಾರ್ಯವನ್ನು ಕೃಷಿ ಸಚಿವ ಎನ್.ಎಚ್. ಶಿವಶಂಕರ್ ರೆಡ್ಡಿ ಅವರು ಫೆಬ್ರವರಿ 8 ರಂದು ಬೆಳಿಗ್ಗೆ 9–30 ಗಂಟೆಗೆ ನೆರವೇರಿಸಲಿದ್ದಾರೆ.

ಸಭೆಗೆ ದೆಹಲಿಯ CACP ಅಧ್ಯಕ್ಷರಾದ ಶ್ರೀ ವಿಜಯ್ ಪಾಲ್ ಶರ್ಮ ಅವರು ಆಗಮಿಸಲಿದ್ದಾರೆ. ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ ಹಾಗೂ ಕೃಷಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಶ್ರೀ ಮಹೇಶ್ವರ್ ರಾವ್ ಅವರು ಉಪಸ್ಥಿತರಿರುವರು.

ದಕ್ಷಿಣ ರಾಜ್ಯಗಳಾದ ಆಂದ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ ಹಾಗೂ ಪುದುಚೇರಿಗಳಿಂದ ಹಿರಿಯ ಅಧಿಕಾರಿಗಳು ಹಾಗೂ ರೈತ ಪ್ರತಿನಿಧಿಗಳು ಸದರಿ ಸಭೆಯಲ್ಲಿ ಭಾಗವಹಿಸಲಿರುವರು. ಸಭೆಯಲ್ಲಿ 2019–20 ಸಾಲಿನ ಮುಂಗಾರು ಬೆಳೆಗಳ ಬೆಲೆ ನೀತಿ ಕುರಿತು ವಿಸ್ತೃತವಾಗಿ ಚರ್ಚೆ ಜರುಗಲಿರುವುದು.